(ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ಹೆಸರು, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಮಾನ್ಯ ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಭೂ ಕಂದಾಯ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಊ) ಕರ್ನಾಟಕ ಸಹಕಾರ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಸೋಮಶೇಕರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "1997ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇದೊಂದು ಚಿಕ್ಕ ತಿದ್ದುಪಡಿ. ಈಗೇನು ಸಹಕಾರ ಸಂಘಗಳ ನೋಂದಣಿ ಕಾಯ್ದೆ 60ಕ್ಕೆ ಕೆಲವು ವಿಚಾರಗಳನ್ನು ಹೇಳಿದ್ದೇವೆ. ದತ್ತಿ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸತಕ್ಕದ್ದು. ಶಿಕ್ಷಣ, ವಿಜ್ಞಾನ, ಸಾಹಿತ್ಯ ಮತ್ತು ಕಲೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಅವಕಾಶ ಇದೆ. ಈಗೇನು ಆಗಿದೆ ಎಂದರೆ ತಿದ್ದುಪಡಿಯಲ್ಲಿ ಹೊಸ ನೈಸರ್ಗಿಕ ಸಂಪನ್ಮೂಲಗಳನ್ನು ಸಂಗ್ರಹಿಸತಕ್ಕ ಅವಕಾಶ ಇರಲಿಲ್ಲ. ಅದಕ್ಕೋಸ್ಕರ ಇದನ್ನೂ ಸೇರಿಸಿಕೊಳ್ಳತಕ್ಕ ಒಂದು ಅವಕಾಶವನ್ನು ವಿಸ್ತರಿಸುತ್ತಿದ್ದೇವೆ, ಇದೊಂದು ಸಣ್ಣ ತಿದ್ದುಪಡಿ ಅಷ್ಟೇ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಈ ಸೊಸೈಟೀಸ್ ರಿಜಿಸ್ಟ್ರೇಷನ್ ಆ್ಯಕ್ಟ್ ಕೆಳಗೆ ತಾವು ಇರಿಗೇಷನ್ ಮ್ಯಾನೇಜ್‌ಮೆಂಟ್ಸ್ ಪಾರ್ಟಿಸಿಪೇಟ್ ಮಾಡತಕ್ಕ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಅದೇ ವೇಳೆಗೆ ಈ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಕೂಡ ಈ ಪ್ರಾವಿಷನ್ ಇದೆ. ಅಲ್ಲೂ ಇರಿಗೇಷನ್ ಕೋ-ಆಪರೇಟೀವ್ ಸೊಸೈಟಿ ಮಾಡಿದ್ದಾರೆ. ನಾಳೆ ಎರಡಕ್ಕೂ ಕೂಡ ಕಾನ್‌ಫ್ಲಿಕ್ಟ್ ಬರಬಾರದು. ಒಂದು ಕಡೆ ಯಾರು ಕೋ-ಆಪರೇಟೀವ್ ಸೊಸೈಟೀಸ್ ಆ್ಯಕ್ಟ್ ಕೆಳಗಡೆ ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೋ ಇನ್ನೂ ಕೆಲವು ಜನ ಈ ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆ್ಯಕ್ಟ್ ಅಂದರೆ ನಿಮ್ಮಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ರಿಜಿಸ್ಟರ್ ಮಾಡತಕ್ಕದ್ದು. ಏಕೆಂದರೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ರಿಜಿಸ್ಟ್ರೇಷನ್ ಮಾಡತಕ್ಕವರಿಗೆ ಲೋನ್ ಸಿಗತಕ್ಕದ್ದು ಆಗಲೀ ಅಥವಾ ಅಲ್ಲಿ ಇಂಡುವಿಜಿಯಲ್ ಬೆನಿಫಿಟ್ ಆಗಲೀ ಸಿಗತಕ್ಕ ಸಾಧ್ಯತೆ ಇಲ್ಲ. ಆದರೆ ಕೋ-ಆಪರೇಟೀವ್‌ನಲ್ಲಿ ಯಾರು ರಿಜಿಸ್ಟ್ರೇಷನ್ ಮಾಡಿಕೊಳ್ಳುತ್ತಾರೋ ಅಥವಾ ಇರಿಗೇಷನ್ ಮ್ಯಾನೇಜ್‌ಮೆಂಟ್ ಏನು ಇದೆ, ಅಲ್ಲಿ ಅವರಿಗೆ ಆಕ್ಟಿವಿಟೀಸ್ ಮಾಡುವುದಕ್ಕೆ ಅವಕಾಶ ಇದೆ. ಇಲ್ಲಿ ಬರೀ ನಾಮಕಾವಾಸ್ತೆ ಮಾಡಿಕೊಂಡು ಭಾರತ ಸರ್ಕಾರದಿಂದಲೇ ಆಗಲೀ ಅಥವಾ ರಾಜ್ಯ ಸರ್ಕಾರದಿಂದಲೇ ಆಗಲೀ ಬೆನಿಫಿಟ್ ಪಡೆದುಕೊಳ್ಳತಕ್ಕದ್ದಕ್ಕೆ ಮಾತ್ರ ಸೊಸೈಟಿ ಮಾಡಿಕೊಂಡು ಇರುತ್ತಾರೆ. ಅವರ ಮೇಲೆ ನಿಮ್ಮ ಹತೋಟಿ ನೇರವಾಗಿ ಇರುವುದಿಲ್ಲ. ಈಗಾಗಲೇ ತಮಗೆ ಗೊತ್ತಿದೆ. ಎಷ್ಟೊಂದು ಎಜುಕೇಶನ್ ಸೊಸೈಟಿಗಳು, ಟ್ರಸ್ಟ್‌ಗಳು, ಎಲ್ಲಾ ಇದೆ. ಕೋಟ್ಯಾಂತರ ರೂಪಾಯಿ ವ್ಯವಹಾರ ಇದ್ದರು ಸಹ ಅನೇಕ ಸಾರಿ ನಮ್ಮ ಸೊಸೈಟಿ ರಿಜಿಸ್ಟ್ರೇಷನ್ ಆ್ಯಕ್ಟ್ ಕೆಳಗಡೆ ಅವರು ನಮಗೆ ಅಕೌಂಟ್ ಕೊಡಬೇಕು. ಆದರೂ ಕೂಡ ಅದರ ಬಗ್ಗೆ ಗಮನ ಇಲಾಖೆಯವರಲ್ಲಿ ಇರುವುದಿಲ್ಲ. ಇಂತಹ ಒಂದು ದೊಡ್ಡ ಇರಿಗೇಷನ್ ಮ್ಯಾನೇಜ್‌ಮೆಂಟ್‌ನ್ನು ಕೂಡ ಇದರಲ್ಲಿ ಅಳವಡಿಸಿಕೊಂಡು ರಿಜಿಸ್ಟ್ರೇಷನ್ ಮಾಡುವಾಗ ಕೋಟ್ಯಾಂತರ ರೂಪಾಯಿ ಇದರಲ್ಲಿ ಇನ್‌ವಾಲ್ವ್‌ಮೆಂಟ್ ಇರುವಾಗ ಅದಕ್ಕೆ ನಿಮ್ಮ ಹತೋಟಿ ಹೇಗೆ ಇಡುವುದಕ್ಕೆ ಸಾಧ್ಯ ಇದೆ? ಅಲ್ಲಿ ಅಕೌಂಟಬಲಿಟಿ ಹೇಗೆ ಬರುತ್ತದೆ? ಮತ್ತು ನೀವು ಆ ಮ್ಯಾನೇಜ್‌ಮೆಂಟನ್ನು ಕಂಟ್ರೋಲ್ ಅಥವಾ ಚೆಕ್ ಮಾಡಲು ಹೇಗೆ ಸಾಧ್ಯವಿದೆ ಎನ್ನತಕ್ಕ ಬಗ್ಗೆ ಸ್ವಲ್ಪ ವಿವರಣೆಯನ್ನು ಕೊಡಬೇಕು.

ಶ್ರೀ ಬಿ. ಸೋಮಶೇಖರ್ : ಈಗೇನು ಸಂಘಗಳ ನೋಂದಣಿ ಆ್ಯಕ್ಟ್‌ಗೆ ಈಗಾಗಲೇ ಸಾಕಾದಷ್ಟು ಹೊಸ ಒಂದು ರೂಪವನ್ನು ನಾವು ಕೊಡುತ್ತಿದ್ದೇವೆ. ಅದು ಬೇರೆ ಆ್ಯಕ್ಟ್‌ನಲ್ಲಿ ಬರುತ್ತಿದೆ. ಇದೊಂದು ಅವಕಾಶವನ್ನು ಕಲ್ಪಿಸಿಕೊಡುವುದಕ್ಕೆ ಮಾಡಿದ್ದೇವೆ. ಈಗ ಉದಾಹರಣೆಗೆ ಪ್ರೈವೇಟ್ ಸೆಕ್ಟಾರ್‌ನವರು ಬರುತ್ತಾರೆ. ಏನಾದರೂ ಒಂದು ಸಂಘವನ್ನು ಮಾಡಿ ಅದರ ಮುಖಾಂತರ ಇಂಡಸ್ಟ್ರೀಯಲ್ ಗ್ರೋತ್ ಇರಬಹುದು, ಎನರ್ಜೈಸೇಷನ್ ಅಂದರೆ ವಿದ್ಯುಚ್ಛಕ್ತಿ ತಯಾರು ಮಾಡುವುದು ಇರಬಹುದು. ಇಂತಹವಕ್ಕೆ ಅವಕಾಶ ಕಲ್ಪಿಸಬೇಕೆಂದು ಮಾಡಿದ್ದೇವೆ. ಆದರೆ ಈ ಆ್ಯಕ್ಟ್‌ನೊಳಗಡೆ ಏನೇನು ನಿಬಂಧನೆಗಳು ಇದೆಯೋ ಅವೆಲ್ಲ ನಿಬಂಧನೆಗಳನ್ನೂ ಅವರು ಚಾಚೂ ತಪ್ಪದೇ ಪಾಲಿಸಬೇಕಾಗುತ್ತದೆ. ಅದರಿಂದೇನೂ ಹೊರತಾಗಿ ಇರತಕ್ಕದ್ದು ಅಲ್ಲ. ಅದರಿಂದ ನಾವು ನಿಬಂಧನೆಗಳನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಡಿಸ್ಕ್ರಿಷನ್ ಇಟ್ಟುಕೊಂಡಿದ್ದೀರಿ. ನಾನು ಓದುತ್ತೇನೆ.

"the promotion of conservation and proper use of natural resources and scarce infrastructural facilities like land, power, water, forest and such other resources and infrastructural facilities, as may be notified by the State Government from time to time."

ಈ ನೋಟಿಫಿಕೇಷನ್ ಮಾಡತಕ್ಕದ್ದೂ ಈ ಸರ್ಕಾರದ ಕೈಯಲ್ಲೇ. ಅದಕ್ಕೆ ಏನು ಆಗುತ್ತದೆ ಅನೇಕ ಜನ ಈ ರಿಜಿಸ್ಟ್ರೇಷನ್ ಆಫ್ ಸೊಸೈಟೀಸ್ ಆ್ಯಕ್ಟ್ ಕೆಳಗಡೆ ಅಸೋಸಿಯೇಷನ್ ಮಾಡಿಕೊಳ್ಳುತ್ತಾರೆ. ಅಕೌಂಟಬಲಿಟಿ ಇರುವುದಿಲ್ಲ: ಈಗ ಉದಾಹರಣೆಗೆ ಹೇಳುತ್ತೇನೆ. ಒಂದು ಎಜ್ಯುಕೇಷನ್ ಸೊಸೈಟಿ. ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜ್, ಹೀಗೆ ಅನೇಕ ಕಾಲೇಜು ನಡೆಸುತ್ತಾರೆ. ಕೋಟಿಗಟ್ಟಲೆ ಟರ್ನ್ ಓವರ್ ಇರುತ್ತದೆ. ಅವರು ಎಲ್ಲಿ ಅಕೌಂಟಬಲಿಟಿ ಕೊಡಬೇಕು? ಇವರ ಹತ್ತಿರವೇ ಕೊಡಬೇಕು. ಆದರೆ ಇಲ್ಲಿಯವರೆಗೆ ತಮಗೆ ಗೊತ್ತಿದೆ, ಯಾವ ಡೈರೆಕ್ಟರೂ ಕೂಡ ಎಂತಹ ಪರಿಸ್ಥಿತಿ ಇದ್ದರೂ ಇಲ್ಲಿಯವರೆಗೆ ಎಲ್ಲೂ ಚೆಕ್ ಮಾಡಿಲ್ಲ ಅವರ ಅಕೌಂಟೂ ನೋಡಿಲ್ಲ, ಅಕೌಂಟೂ ಕೇಳಿಲ್ಲ.

ನೀವು ಎಷ್ಟು ಕಲೆಕ್ಟ್ ಮಾಡುತ್ತೀರಿ? ಎಷ್ಟು ಖರ್ಚು ಮಾಡುತ್ತೀರಿ ಎಂಬುದನ್ನೂ ಕೂಡ ಕೇಳಿಲ್ಲ. ನಿಮ್ಮ ಲಿಬರಲೈಸ್ಡ್ ಪಾಲಿಸಿ ಅಡಿಯಲ್ಲಿ ಅನೇಕ ಜನ ಇಂಡಸ್ಟ್ರೀ ಮುಂತಾದವು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದು ಈ ಸಹಕಾರ ಸಂಘಗಳ ಕಾಯ್ದೆ ಅಡಿ ರಿಜಿಸ್ಟ್ರೇಷನ್ ಮಾಡಿಕೊಂಡು ಹೋಗಿ ನಾಳೆ ಸರ್ಕಾರದಿಂದಾಗಲೀ, ಬ್ಯಾಂಕ್‌ನಿಂದಾಗಲೀ ಹಣವನ್ನೂ ಕೂಡ ಪಡೆದುಕೊಳ್ಳತಕ್ಕಂಥ ಸಾಧ್ಯತೆ ಇದೆ. ಅದನ್ನು ನೀವು ಚೆಕ್ ಮಾಡುವಂತಾದ್ದು ಆಗಲೀ, ಅದನ್ನು ಆಡಿಟ್ ಮಾಡತಕ್ಕಂಥದ್ದು ಆಗಲೀ, ನಿಮ್ಮ ಅಧಿಕಾರಿಗಳು ಅದಕ್ಕಾಗಿ ಹೋಗತಕ್ಕಂಥದ್ದು ಆಗಲೀ ಇದರ ಕೆಳಗೆ ಹೇಗೆ ಸಾಧ್ಯವಿದೆ? ಎಂಬುದನ್ನು ನೀವು ಹೇಳಿ.

ಶ್ರೀ ಬಿ. ಸೋಮಶೇಖರ್ (ಕುಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಅಕೌಂಟಬಲಿಟಿ ಮತ್ತು ಪ್ರತಿ ವರ್ಷ ಅವರಿಗೂ ಕೂಡ ಅಕೌಂಟ್ ಕೊಡತಕ್ಕಂಥದ್ದು ಮತ್ತು ರಿನ್ಯೂವಲ್ ಮಾಡತಕ್ಕದ್ದು, ಇದೆಲ್ಲಾ ಆ್ಯಕ್ಟ್‌ನಲ್ಲಿ ಇದೆ. ಆದರೆ ಸರಿಯಾಗಿ ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುತ್ತಿಲ್ಲ. ಈ ಲೂಪ್‌ಹೋಲ್ಸ್ ಇವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಸಮಗ್ರವಾದಂತಹ ಮಸೂದೆಯೊಂದನ್ನು ನಾನು ಈಗಾಗಲೇ ತರಬೇಕಾಗಿತ್ತು. ಆದರೆ ಅದಕ್ಕೆ ಸಾಕಷ್ಟು ಟೈಮ್ ಸಿಗಲಿಲ್ಲ. ನಂತರ ನಾವು ಅದನ್ನು ತರುತ್ತಿದ್ದೇವೆ. ತಾವೂ ಕೂಡ ಈ ಇಲಾಖೆಯನ್ನು ನಡೆಸಿದವರು. ತಮಗೆ ಅದರ ಬಗ್ಗೆ ಗೊತ್ತಿದೆ. ತಾವೇನು ಹೇಳಿದ್ದೀರಿ ಅದಕ್ಕೆ ತಿದ್ದುಪಡಿ ತರಬೇಕು ನಿಜ. ಅದರ ಬದಲು ನಾವು ಹೊಸ ಕಾಯ್ದೆಯನ್ನೇ ತರಬೇಕೆಂದಿದ್ದೇವೆ. ಈಗ ಉದಾಹರಣೆಗೆ ಹೇಳುವುದಾದರೆ, ಬಾಂಬೆ-ಕರ್ನಾಟಕ ಏರಿಯಾಗೆ ಪ್ರತ್ಯೇಕವಾದಂತಹ ಒಂದು ಆ್ಯಕ್ಟ್ ಇದೆ, ಮೈಸೂರಿನಲ್ಲಿ ಮತ್ತೊಂದು ಆ್ಯಕ್ಟ್ ಚಾಲ್ತಿಯಲ್ಲಿದೆ. ಇದೆಲ್ಲವನ್ನೂ ಸಮಗ್ರವಾಗಿ ಸೇರಿಸಿ 'ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆ್ಯಕ್ಟ್' ಎಂದು ಹೇಳಿ ಹೊಸದಾಗಿ ನಾವು ತರುತ್ತಿದ್ದೇವೆ. ಅದರಲ್ಲಿ ಏನೇನು ಕಡಿವಾಣ ಹಾಕಬೇಕೋ ಅದನ್ನೆಲ್ಲವನ್ನೂ ನಾವು ಹಾಕುತ್ತಿದ್ದೇವೆ. ಆದರೆ ಈಗ

ಇರತಕ್ಕ ಕಾಯ್ದೆಯನ್ನು ಎಕ್ಸ್‌ಪ್ಯಾಂಡ್ ಮಾಡುತ್ತಿರುವುದಕ್ಕೆ ಇದೊಂದು ಸಣ್ಣ ತಿದ್ದುಪಡಿ ಅಷ್ಟೆ. ತಾವೇನು ಹೇಳಿದಿರೋ ಅದನ್ನೆಲ್ಲಾ ಅಳವಡಿಸಲಾಗಿರುವ ಹೊಸ ಕಾಯ್ದೆಯೊಂದನ್ನು ಮುಂದಿನ ತಿಂಗಳಿನಲ್ಲಿ ತರುತ್ತಿದ್ದೇವೆ. ತಾವು ಹೇಳಿದ್ದನ್ನು ಆಗ ಮಾಡಬಹುದು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"1997ರ ಕರ್ನಾಟಕ ಸಹಕಾರ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, "1997ರ ಕರ್ನಾಟಕ ಸಹಕಾರ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1997ರ ಕರ್ನಾಟಕ ಸಹಕಾರ ಸಂಘಗಳ ನೋಂದಣಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು